## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1409 (1637) |
| ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 19.12.2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2022-23, 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ರಾಜ್ಯದ ರೈತರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳಾವುವು; ಸಂಪೂರ್ಣ ವಿವರ ನೀಡುವುದು; (ಪ್ರತ್ಯೇಕವಾಗಿ ಮಾಹಿತಿ ನೀಡುವುದು) | 2022-23, 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ ರೂಪಿಸಿರುವ ಯೋಜನೆಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.<br><br>ರಾಜ್ಯದ ರೈತರ ಕಲ್ಯಾಣಕ್ಕಾಗಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ರೂಪಿಸಿರುವ ಯೋಜನೆಗಳು ಕೆಳಕಂಡಂತಿವೆ:<br>2022-23:<br>1. ಕೇಂದ್ರ ಪುರಸ್ಕೃತ "ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ 2.0 (WDC-PMKSY 2.0)"<br>2. KAPPEC ಮುಖಾಂತರ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಾಮಾನ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಿ, ಕೊಯ್ಲೋತ್ತರ ನಿರ್ವಹಣೆ ಕೈಗೊಂಡು ಅವುಗಳ ಉತ್ಪನ್ನಗಳನ್ನು ಮಾರಾಟ ಮತ್ತು ರಫ್ತು ಮಾಡುವುದು.<br><br>2023-24:<br>1. ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕುಗಳ 100 FPO ಗಳು ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ತಲಾ 20 ಲಕ್ಷ ರೂ.ವರೆಗೆ ಪಡೆದ ಸಾಲಕ್ಕೆ ಶೇ 4 ರ ಬಡ್ಡಿ ಸಹಾಯಧನ ನೀಡುವ ಕಾರ್ಯಕ್ರಮ.<br>2. ರೈತ ಉತ್ಪನ್ನಗಳಿಗೆ ಏಕೀಕೃತ ಬ್ರ್ಯಾಂಡಿಂಗ್ ಯೋಜನೆ.<br>3. ರೈತ ಉತ್ಪಾದಕರ ಸಂಸ್ಥೆಗಳ ಉತ್ಪನ್ನಗಳನ್ನು ರಫ್ತು ಮಾಡಲು ಅನುಕೂಲವಾಗುವಂತೆ ಗೋದಾಮು, ಶೀತಲ ಗೃಹ, ನಿರ್ಮಾಣ ಮತ್ತು ಇತರ ಮೂಲಸೌಕರ್ಯ ಸೃಜನೆಗೆ ಯೋಜನಾ ವೆಚ್ಚದ ಗರಿಷ್ಠ ಶೇ. 20 ರಷ್ಟು, ರೂ. 1.00 ಕೋಟಿ ಮೀರದಂತೆ Seed Capital ಒದಗಿಸಲಾಗುವುದು. |

| | | |
|---|---|---|
| | | 4. ರಾಜ್ಯದಲ್ಲಿ ಬೆಳೆದ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ರಫ್ತನ್ನು ಉತ್ತೇಜಿಸಲು ರೈತ ಉತ್ಪಾದಕರ ಸಂಸ್ಥೆಗಳು, ನವೋದ್ಯಮಗಳು ಮತ್ತು ಕಿರು ಆಹಾರ ಸಂಸ್ಕರಣೆ ಉದ್ದಿಮೆದಾರರಿಗೆ ಬೆಂಬಲ.<br><br>2024-25 ಮತ್ತು 2025-26ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಯೋಜನೆ ರೂಪಿಸಿರುವುದಿಲ್ಲ |
| ಆ) | 2022-23ನೇ ಸಾಲಿನಲ್ಲಿ ಸರ್ಕಾರದಲ್ಲಿ ರೂಪಿಸಲಾದ ರೈತ ಕಲ್ಯಾಣ ಯೋಜನೆಗಳನ್ನು ಯಥಾವತ್ತಾಗಿ ಮುಂದುವರೆಸಲಾಗಿದೆಯೇ; ಅಥವಾ ಯಾವುದಾದರೂ ಯೋಜನೆಗಳನ್ನು ಕೈಬಿಟ್ಟಿದ್ದೀರಾ; ಯೋಜನೆಗಳನ್ನು ನಿಲ್ಲಿಸಿದ್ದರೆ ವಿವರಣೆಯೊಂದಿಗೆ ದಾಖಲೆಗಳ ಸಮೇತ ಸಂಪೂರ್ಣ ಮಾಹಿತಿ ನೀಡುವುದು; | 2022-23ನೇ ಸಾಲಿನಲ್ಲಿ ಸರ್ಕಾರದಲ್ಲಿ ರೂಪಿಸಲಾದ ಯೋಜನೆಗಳಲ್ಲಿ ಮಿನಿ ಆಹಾರ ಪಾರ್ಕುಗಳ ಸ್ಥಾಪನೆ, ರೈತಶಕ್ತಿ ಮತ್ತು ಮುಖ್ಯಮಂತ್ರಿಗಳ ನೈಸರ್ಗಿಕ ಕೃಷಿ ಯೋಜನೆಗಳನ್ನು ಮುಂದುವರೆಸಿರುವುದಿಲ್ಲ. 2023-24ನೇ ಸಾಲಿನಿಂದ ಈ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಿರುವುದಿಲ್ಲ.<br>2023-24ನೇ ಸಾಲಿನ ಆರ್ಥಿಕ ಇಲಾಖೆಯ ಸಲಹಾ ಟಿಪ್ಪಣಿ ಸಂಖ್ಯೆ: ಆಇ 226 ವೆಚ್ಚ-4/2023, ದಿನಾಂಕ:31.07.2025ನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br><br>2022-23ನೇ ಸಾಲಿನಲ್ಲಿ ರೈತರ ಕಲ್ಯಾಣಕ್ಕಾಗಿ ರೂಪಿಸಿದ್ದ KAPPEC ಮುಖಾಂತರ ರೈತ ಉತ್ಪಾದಕರ ಸಂಸ್ಥೆಗಳಿಗೆ ಸಾಮಾನ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಿ, ಕೊಯ್ಲೋತ್ತರ ನಿರ್ವಹಣೆ ಕೈಗೊಂಡು ಅವುಗಳ ಉತ್ಪನ್ನಗಳನ್ನು ಮಾರಾಟ ಮತ್ತು ರಫ್ತು ಮಾಡುವ ಯೋಜನೆಯನ್ನು ಮುಂದುವರೆಸಿರುವುದಿಲ್ಲ. |
| ಇ) | 2023-ಮೇ ತಿಂಗಳಿನಿಂದ ನವೆಂಬರ್ 2025ರ ವರೆಗೆ ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿದೆಯೇ; ಒಟ್ಟು ಎಷ್ಟು ಅನ್ನದಾತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ಕಾರಣಗಳೇನು; ಪ್ರಾಣ ಕಳೆದುಕೊಂಡ ಅನ್ನದಾತರಿಗೆ ಪರಿಹಾರ ಪಾವತಿಸಲಾಗಿದೆಯೇ; (ವರ್ಷವಾರು ಮತ್ತು ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | 2023 ಮೇ ಮಾಹೆಯಿಂದ 2025 ನವೆಂಬರ್ ಮಾಹೆಯವರೆಗೆ ಒಟ್ಟು 2809 ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿದ್ದು, ಈ ಪೈಕಿ 2422 ಅರ್ಹ ಪ್ರಕರಣಗಳಾಗಿರುತ್ತವೆ. ಆತ್ಮಹತ್ಯೆ ಪ್ರಕರಣಗಳನ್ನು ಉಪ ವಿಭಾಗ ಮಟ್ಟದ ಸಮಿತಿಯಲ್ಲಿ ಪರಿಶೀಲಿಸಲಾಗುತ್ತಿದ್ದು, ಆತ್ಮಹತ್ಯೆಗೆ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಮತ್ತು ಸಾಂಸಾರಿಕ ಸಮಸ್ಯೆಗಳು, ಸಾಮರ್ಥ್ಯಕ್ಕೆ ಮೀರಿದ ಸಾಲ, ಬೆಳೆ ನಷ್ಟ, ಪ್ರಕೃತಿ ವಿಕೋಪ, ಸಾಲ ಭಾದೆ, ಹವಾಮಾನ ವೈಪರೀತ್ಯಗಳು, ಅನಾರೋಗ್ಯ, ಬಡತನ, ಮಾನಸಿಕ ಖಾಯಿಲೆ, ಮದುವೆ ಸಂಬಂಧಿತ ವಿಷಯಗಳು, ನಿರುದ್ಯೋಗ ಹಾಗೂ ಕೌಟುಂಬಿಕ ಕಾರಣಗಳು ಸೇರಿದಂತೆ ವಿವಿಧ ಸಮಸ್ಯೆಗಳು ಕಾರಣಗಳಾಗಿರುತ್ತವೆ ಎಂದು ವಿವಿಧ ಸಮಿತಿ/ಮೂಲಗಳ ಪ್ರಕಾರ ತಿಳಿದುಬಂದಿರುತ್ತದೆ.<br>ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. |

| | | |
|---|---|---|
| | | ಕಂದಾಯ ಇಲಾಖೆಯಿಂದ ಉಪ ವಿಭಾಗಾಧಿಕಾರಿಗಳ ಸಮಿತಿಯ ವರದಿಯನ್ನಾಧರಿಸಿ ಅರ್ಹ ರೈತ ಕುಟುಂಬದ ವಾರಸುದಾರರಿಗೆ ಸರ್ಕಾರದ ಆದೇಶ ಸಂಖ್ಯೆ ಕೃಇ 57ಕೃಉಇ 2015(ಭಾ-1) ದಿನಾಂಕ:11.11.2015 ರಂತೆ ರೂ.5.00 ಲಕ್ಷಗಳ ಮೊತ್ತವನ್ನು ಪರಿಹಾರವಾಗಿ ಪಾವತಿಸಲು ಕ್ರಮವಹಿಸಲಾಗುತ್ತಿದೆ.<br>ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-4ರಲ್ಲಿ ಒದಗಿಸಲಾಗಿದೆ. |
| ಈ) | ಪ್ರಸ್ತುತ ಹಣಕಾಸು ವರ್ಷದಲ್ಲಿ ರೈತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನ, ಮಂಜೂರು ಮಾಡಿದ ಅನುದಾನ ಹಾಗೂ ಬಳಕೆಯಾದ ಅನುದಾನದ ಸಂಪೂರ್ಣ ಮಾಹಿತಿ ನೀಡುವುದು; ಮಂಜೂರಾದ ಅನುದಾನವನ್ನು ಬಳಕೆ ಮಾಡದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಪ್ರಸ್ತುತ ಹಣಕಾಸು ವರ್ಷದಲ್ಲಿ ರೈತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನ, ಮಂಜೂರು ಮಾಡಿದ ಅನುದಾನ ಹಾಗೂ ಬಳಕೆಯಾದ ಅನುದಾನದ ಕೃಷಿ ಇಲಾಖೆಯ ವಿವರಗಳನ್ನು ಅನುಬಂಧ-5ರಲ್ಲಿ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆ ವಿವರಗಳನ್ನು ಅನುಬಂಧ-6ರಲ್ಲಿ ಒದಗಿಸಲಾಗಿದೆ. |
| ಉ) | ಬರಗಾಲದ ಸಮಯದಲ್ಲಿ ರೈತರ ಬೆಳೆಗಳು ಹಾನಿಯಾಗಿದ್ದು, ಅವರನ್ನು ಆರ್ಥಿಕವಾಗಿ ಸದೃಡಗೊಳಿಸಲು ಹಾಗೂ ಬರದಿಂದಾದ ನಷ್ಟವನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬರಗಾಲದ ಸಮಯದಲ್ಲಿ ರೈತರ ಬೆಳೆಗಳು ಹಾನಿಯಾಗಿದ್ದಲ್ಲಿ ಕೇಂದ್ರ ಗೃಹ ಮಂತ್ರಾಲಯದ ಮಾರ್ಗಸೂಚಿಗಳ ಅನ್ವಯ ಹೆಕ್ಟೇರ್ 1ಕ್ಕೆ ಮಳೆಯಾಶ್ರಿತ ಬೆಳೆಹಾನಿಗೆ ರೂ.8,500/-, ನೀರಾವರಿ ಬೆಳೆಹಾನಿಗೆ ರೂ.17,000/- ಮತ್ತು ಬಹುವಾರ್ಷಿಕ ಬೆಳೆಹಾನಿಗೆ ರೂ.22,500/- ಗಳಂತೆ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಇನ್ಪುಟ್ ಸಬ್ಸಿಡಿಯನ್ನು ಪಾವತಿಸಲಾಗುತ್ತದೆ.<br>Manual for Drought Management-2020 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಕುಡಿಯುವ ನೀರಿನ ಕೊರತೆ ಇರುವ ಗ್ರಾಮಗಳಿಗೆ ಖಾಸಗಿ ಬೋರ್‌ವೆಲ್‌ಗಳ ಮುಖಾಂತರ ಮತ್ತು ಟ್ಯಾಂಕರ್‌ಗಳ ಮುಖಾಂತರ ನೀರು ಸರಬರಾಜು ಮಾಡಲಾಗುತ್ತದೆ. ಜಾನುವಾರುಗಳಿಗೆ ಮೇವು ಕೊರತೆ ಇರುವ ಗ್ರಾಮಗಳಿಗೆ ಮೇವು ಪೂರೈಕೆ ಮಾಡಲಾಗುತ್ತದೆ. |

ಸಂಖ್ಯೆ:AGRI/290/AML/2025

(ಎನ್.ಚಲುವರಾಯಸ್ವಾಮಿ)
ಕೃಷಿ ಸಚಿವರು.